# ಪರಿಸರ ಅಧ್ಯಯನ

## ENVIRONMENTAL STUDIES

KANNADA MEDIUM

## ಎರಡನೆಯ ತರಗತಿ


## STANDARD TWO

### ಎರಡನೆಯ ಅವಧಿ

### Term II

# 1. ಊರಿನ ಸಂತೆ






ರವಿಯೂ, ಅವನ ಅಪ್ಪನೂ

ತರಕಾರಿಗಳು, ಹಣ್ಣುಗಳನ್ನು

ತರಲು ಸಂತೆಗೆ ಹೋದರು.






**ರವಿ** : ಅಪ್ಪಾ ! ಸಂತೆಯಲ್ಲಿ ಏನೇನು ಸಿಗುತ್ತದೆ ?

**ಅಪ್ಪಾ** : ನಮ್ಮ ಆಹಾರಕ್ಕೆ ಬೇಕಾಗುವ ದಾನ್ಯಗಳು, ಬೇಳೆ ಬಗೆಗಳು, ತರಕಾರಿಗಳು, ಹಣ್ಣುಗಳು ಮತ್ತು ಸೊಪ್ಪುಗಳು ಸಿಗುತ್ತವೆ.



**ರವಿ :** ಅಪ್ಪಾ ! ದಿನಸಿ ಅಂಗಡಿಯಲ್ಲಿ ಕೆಲವು ಪದಾರ್ಥಗಳನ್ನು ಕೊಂಡುಕೊಂಡಿರಿ ಅವು ಯಾವುವು ?

**ಅಪ್ಪಾ :** ಅವು ನಾವು ಪ್ರತಿನಿತ್ಯ ಆಹಾರ ಪದಾರ್ಥಗಳಲ್ಲಿ ಉಪಯೋಗಿಸುವ ದಾನ್ಯಗಳು, ಬೇಳೆ ಬಗೆಗಳು ಆಗಿವೆ.



______________



______________





______________

**ರವಿ :** ಅಪ್ಪಾ ! ಬೇರೆ ಯಾವ ಯಾವ ಪದಾರ್ಥಗಳನ್ನು ಕೊಂಡುಕೊಂಡಿರಿ ?

**ಅಪ್ಪಾ :** ನಮ್ಮ ಆಹಾರ ರುಚಿಯಾಗಿರಲು ಬೇಕಾಗುವ ಸುವಾಸನಾ ವಸ್ತುಗಳನ್ನು ಸಂಬಾರ ಪದಾರ್ಥಗಳನ್ನು ಕೊಂಡುಕೊಂಡೆನು.

ಕೆಳಗೆ ಕೊಡಲ್ಪಟ್ಟಿರುವ ಸುವಾಸನಾ ವಸ್ತುಗಳ ಹೆಸರುಗಳನ್ನು ಬರೆಯೋಣವೇ !



______________



______________




______________



______________



______________



______________

**ಅಪ್ಪಾ :** ರವಿ ಹಣ್ಣಿನ ಅಂಗಡಿಯಲ್ಲಿ ಯಾವ ಯಾವ ಹಣ್ಣುಗಳನ್ನು ನೋಡಿದೆ ?

**ರವಿ :** ಸೇಬು, ಕಿತ್ತಳೆ, ದ್ರಾಕ್ಷಿ, ಮಾವಿನ ಹಣ್ಣು, ಸೀಬೆಹಣ್ಣು ಮುಂತಾದ ಹಣ್ಣುಗಳನ್ನು ನೋಡಿದೆ.




**ಕೆಳಗೆ ಕೊಡಲ್ಪಟ್ಟಿರುವ ಹಣ್ಣುಗಳ ಹೆಸರುಗಳನ್ನು ಬರೆಯೋಣವೇ !**



_______________



_______________



_______________



_______________



_______________




_______________

**ರವಿ** : ಅಪ್ಪಾ ನಾನು ನೋಡಿದ ತರಕಾರಿಗಳ ಹೆಸರುಗಳನ್ನು ಹೇಳಲೇ ?

**ಅಪ್ಪಾ** : ಸರಿ ಹೇಳು ನೋಡೋಣ

**ರವಿ** : ಟೊಮೆಟೊ, ಬದನೆಕಾಯಿ, ಹಾಗಲಕಾಯಿ, ಪಡವಲಕಾಯಿ.



**ಕೆಳಗೆ ಕೊಡಲ್ಪಟ್ಟಿರುವ ತರಕಾರಿಗಳ ಹೆಸರುಗಳನ್ನು ಬರೆಯೋಣವೇ !**

 ______

 ______

 ______

 ______

 ______

 ______

**ಅಪ್ಪಾ :** ಸೊಪ್ಪಿನ ಅಂಗಡಿಯಲ್ಲಿ ಯಾವ ಯಾವ ಸೊಪ್ಪುಗಳನ್ನು ನೋಡಿದೆ ?

**ರವಿ :** ಸೊಪ್ಪುಗಳಲ್ಲಿ ನುಗ್ಗೆ ಸೊಪ್ಪು, ದಂಟಿನ ಸೊಪ್ಪು, ಕೀರೆ ಸೊಪ್ಪು, ಬೆಳಗುಣಿಕೆ ಸೊಪ್ಪು, ಪುದಿನಾ ಸೊಪ್ಪು ಮುಂತಾದ ಹಲವು ಬಗೆಯ ಸೊಪ್ಪುಗಳನ್ನು ನೋಡಿದೆ.

**ಕೆಳಗೆ ಕೊಡಲ್ಪಟ್ಟಿರುವ ಸೊಪ್ಪುಗಳ ಹೆಸರುಗಳನ್ನು ಬರೆಯೋಣವೇ !**





______________________ ______________________






______________________ ______________________

ಪರಿಸರ ಅಧ್ಯಯನ

ಆಗ ಐಸ್ ಕ್ರೀಂ ಗಾಡಿಯವನು ಅವರ ಹತ್ತಿರ ಬರುತ್ತಿರಲು **ರವಿಗೆ** ಐಸ್ ಕ್ರೀಂ ತಿನ್ನುವ ಆಸೆ ಉಂಟಾಯಿತು.




**ರವಿ :** ಅಪ್ಪಾ ಐಸ್ ಕ್ರೀಂ ತೆಗೆದುಕೊಡಪ್ಪ.

**ಅಪ್ಪ :** ಬೇಡ ಮಗನೆ. ನಿನ್ನೆ ತಾನೇ ತಿಂದಿದ್ದೀಯಾ.ಐಸ್ ಕ್ರೀಮ್‌ನನ್ನು ಪ್ರತಿದಿನ ಸೇವಿಸಬಾರದು.

**ರವಿ :** ಐಸ್ ಕ್ರೀಂ ತಿಂದರೆ ಏನಾಗುತ್ತೆ ?


**ಅಪ್ಪ :** ಐಸ್ ಕ್ರೀಂ ತಿನ್ನುವುದರಿಂದ ಹಲ್ಲುಗಳಿಗೂ, ಶರೀರಕ್ಕೂ ಒಳ್ಳೆಯದಲ್ಲಾ. ಬೇಕಾದರೆ ಹಾಲನ್ನು ಕುಡಿ. ತೆಗೆದುಕೊಡಲೇ ?

**ರವಿ :** ಸರಿಯಪ್ಪಾ.

(ಇಬ್ಬರು ಹಾಲನ್ನು ಕುಡಿಯುತ್ತಾರೆ).

**ರವಿ :** ಕೋವಾವನ್ನು ಹಾಲಿನಿಂದ ತಯಾರಿಸುತ್ತಾರೆಯಾ ಅಪ್ಪಾ ?

**ಅಪ್ಪ :** ಹೌದು ರವಿ, ಕೋವಾ, ಪೇಡಾ ಮುಂತಾದ ಸಿಹಿ ತಿಂಡಿಗಳನ್ನು ಹಾಲಿನಿಂದ ತಯಾರಿಸುತ್ತಾರೆ.



ಬೇರೆ ಯಾವ ಯಾವ ವಸ್ತುಗಳು ಹಾಲಿನಿಂದ ನಮಗೆ ಸಿಗುತ್ತವೆ ಎಂಬುದನ್ನು ಬೇರೆಯವರಿಂದ ಕೇಳಿ ಬರೆಯಿರಿ.

____________________

____________________

____________________

**ರವಿ :** ಅಪ್ಪಾ ನಾವು ಸೇವಿಸುವ ಆಹಾರ ಪದಾರ್ಥದಲ್ಲಿ ಯಾವುದಕ್ಕಾಗಿ ಇವುಗಳನ್ನೆಲ್ಲಾ ಸೇರಿಸಬೇಕು ?

**ಅಪ್ಪಾ :** ನಮ್ಮ ಆರೋಗ್ಯಕರ ಜೀವನಕ್ಕಾಗಿ ಇಂತಹ ಆಹಾರ ಪದಾರ್ಥಗಳನ್ನು ಆಹಾರದಲ್ಲಿ ಸೇರಿಸಬೇಕು. ನಾವು ಸೇವಿಸುವ ಆಹಾರ ಪದಾರ್ಥಗಳಲ್ಲಿ ಕೆಲವು ಶಕ್ತಿಗೂ, ಕೆಲವು ಬೆಳವಣಿಗೆಗೂ, ಕೆಲವು ರಕ್ಷಣೆಗೂ ಸಹಕಾರಿಯಾಗುವುದು.

ನಮ್ಮ ಆರೋಗ್ಯಕರ ಜೀವನಕ್ಕಾಗಿ ನಮ್ಮ ಆಹಾರದಲ್ಲಿ ತರಕಾರಿಗಳು, ಹಣ್ಣುಗಳು,

ಸೊಪ್ಪುಗಳು, ದಾನ್ಯಗಳು ಮತ್ತು ಬೇಳೆ ಬಗೆಗಳನ್ನು


ಅವಶ್ಯಕವಾಗಿ ಸೇರಿಸಿಕೊಳ್ಳಬೇಕು.

ಅವು ನಮಗೆ ಶಕ್ತಿಯನ್ನು, ರಕ್ಷಣೆಯನ್ನು ನೀಡುತ್ತವೆ.


**ನೀವು ಇಷ್ಟಪಟ್ಟು ತಿನ್ನುವ ಆಹಾರ ಪದಾರ್ಥಗಳನ್ನು ಬರೆಯಿರಿ.**

**ನಿಮ್ಮ ಗೆಳೆಯರು, ಕುಟುಂಬದವರು, ಇಷ್ಟಪಟ್ಟು ತಿನ್ನುವ ಆಹಾರ ಪದಾರ್ಥಗಳನ್ನು ಬರೆಯಿರಿ.**

● ಆಹಾರ ಪದಾರ್ಥಗಳಿಗೆ ಸರಿ ಹೊಂದುವ ಬಣ್ಣವನ್ನು ಹಾಕೋಣವೇ !



ವಿಂಗಡಿಸಿ ನೋಡೋಣವೆ :



| ದಾನ್ಯಗಳು | ಬೇಳೆಗಳು | ತರಕಾರಿಗಳು | ಸೊಪ್ಪುಗಳು | ಹಣ್ಣುಗಳು | ಮಾಂಸಗಳು |
| --- | --- | --- | --- | --- | --- |
| | | | | | |
| | | | | | |
| | | | | | |

**ಕೆಳಕಂಡ ಆಹಾರ ಪದಾರ್ಥಗಳಿಂದ ಯಾವ ಯಾವ ಆಹಾರ ಪದಾರ್ಥಗಳನ್ನು ತಯಾರಿಸಬಹುದು.**

| | | | |
|---|---|---|---|
| ಅಕ್ಕಿ | ಅನ್ನ | | |
| ಗೋದಿ | | | |
| ಹಾಲು | | | ಮೊಸರು |
| ಉದ್ದು | ವಡೆ | | |
| ತೊಗರಿ ಬೇಳೆ | | | |
| ಕಡಲೆ ಬೇಳೆ | | | ಒಬ್ಬಟ್ಟು |

**ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಕೆಲವು ಆಹಾರ ಪದಾರ್ಥಗಳ ಹೆಸರುಗಳನ್ನು ಕೊಡಲಾಗಿದೆ. ಅವುಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.**

| | | | | | | |
|---|---|---|---|---|---|---|
| ಹಾ | ರಿ | ಮೊ | ಟ್ಟೆ | ಗು | ಇ | ಲ |
| ಲು | ಮು | ತ | ಕ | ಕೋ | ಗೋ | ದಿ |
| ಪಾ | ಣ | ಅ | ಡ | ಅ | ಕ್ಕಿ | ಉ |
| ಟ | ಸು | ಸಿ | ಪಿ | ಕ | ಡ | ಲೆ |
| ಕ | ಆ | ಸೇ | ಬು | ಳ | ಗು | ರ |
| ತೊ | ಗ | ರಿ | ಲಾ | ವ | ಪಿ | ಲಾ |
| ಮು | ನಿ | ಉ | ದ್ದು | ತು | ಮಿ | ಮಾ |

ಬೇಳೆ ಬಗೆಗಳು : ________________

ಹಣ್ಣಿನ ಬಗೆಗಳು : ________________


ಸಂಬಾರ ಪದಾರ್ಥಗಳು : ________________

ಮಾಂಸಹಾರ ಪದಾರ್ಥಗಳು : ________________

ಒಂದು ಆಕರ್ಷಕ ಗಿಳಿಯ ಚಿತ್ರವನ್ನು, ಧಾನ್ಯಗಳನ್ನು ಅಂಟಿಸಿ ರಚಿಸೋಣವೇ?

ಹೆಸರು : ____________  ತರಗತಿ : ____________

ತರಕಾರಿಗಳು, ಹಣ್ಣುಗಳು, ಧಾನ್ಯಗಳು ಮತ್ತು ಇತರ ಆಹಾರ ಪದಾರ್ಥಗಳ ವಿವಿಧ ಚಿತ್ರಗಳ ಒಂದು ಅಲ್ಬಂನನ್ನು ತಯಾರಿಸೋಣವೇ !



**ನಿಮಗಿದು ತಿಳಿದಿದೆಯೇ ?**

ಚಾಕ್ಲೇಟ್, ಐಸ್ ಕ್ರೀಂ, ತಂಪು ಪಾನೀಯಗಳು, ಮುಂತಾದವುಗಳನ್ನು ಸೇವಿಸುವುದರಿಂದ ಆರೋಗ್ಯಕ್ಕೆ ಒಳ್ಳೆಯದಲ್ಲಾ. ಏಕೆ?



# 2. ಕೆಲಸ

ಚಿತ್ರದಲ್ಲಿ ಪ್ರತಿಯೊಬ್ಬರು ಮಾಡಲ್ಪಡುವ ಕೆಲಸಗಳನ್ನು ನೋಡಿರಿ. ಅವರುಗಳು ಏನು ಮಾಡುತ್ತಿರುವರು ಎಂಬುದನ್ನು ತಿಳಿಸಿರಿ.



ಒಂದು ವಸ್ತುವನ್ನು ಚಲಿಸಲು ಅದನ್ನು ಎಳೆಯಬೇಕು [ಅಥವಾ] ತಳ್ಳಬೇಕು.







ಎಳೆಯುವುದರ, ತಳ್ಳುವುದರ ಮೂಲಕವೇ ಕೆಲಸ ಮಾಡಲ್ಪಡುವುದು.




ಜನರು ರಥವನ್ನು
ಎಳೆಯುವುದರಿಂದ ರಥವು
ಚಲಿಸುವುದು




ಹಗ್ಗವನ್ನು ಎಳೆಯುವ
ಪಂದ್ಯದಲ್ಲಿ ಎರಡು
ತಂಡಗಳು ಹಗ್ಗವನ್ನು ತನ್ನ
ಕಡೆಗೆ ಎಳೆಯುತ್ತಾರೆ



ಕುದುರೆಯು ಗಾಡಿಯನ್ನು
ಎಳೆಯುವುದರಿಂದ
ಗಾಡಿಯು ಮುಂದೆ
ಚಲಿಸುವುದು



ತರಕಾರಿ ಗಾಡಿಯವನು ಗಾಡಿಯನ್ನು ತಳ್ಳುವುದರಿಂದ ಗಾಡಿಯು ಮುಂದೆ ಚಲಿಸುವುದು



ಮೀನುಗಾರರು ದೋಣಿಯನ್ನು ತಳ್ಳುವುದರಿಂದ ದೋಣಿಯು ನೀರಿನಲ್ಲಿ ಚಲಿಸುವುದು



ಮಗು ತಳ್ಳುಬಂಡಿಯನ್ನು ತಳ್ಳುವುದರಿಂದ ಬಂಡಿಯು ಚಲಿಸುವುದು



ಬಂಡಿಯನ್ನು ಎಳೆಯುವಾಗ,
ತಳ್ಳುವಾಗ ಬಂಡಿಯು
ಹಿಂದೆ, ಮುಂದೆ
ಚಲಿಸುವುದು.





ಗರಗಸವನ್ನು
ಎಳೆಯುವುದರಿಂದ,
ತಳ್ಳುವುದರಿಂದ ಮರವು
ಕತ್ತರಿಸಲ್ಪಡುವುದು.



ಚಿತ್ರವನ್ನು ನೋಡು ಇಲ್ಲಿ ಯಾವ ಕೆಲಸ ನಡೆಯುತ್ತಿರುವುದು.













ಎಳೆಯುವುದರ, ತಳ್ಳುವುದರ ಮೂಲಕ
ಕೆಲಸ ಮಾಡಲ್ಪಡುತ್ತದೆ.

ಚಿತ್ರದಲ್ಲಿ ಎಳೆಯುವ ಕೆಲಸಕ್ಕೆ [1] ಎಂದೂ, ತಳ್ಳುವ ಕೆಲಸಕ್ಕೆ [2] ಎಂದೂ ಗುರುತಿಸಿರಿ.










**ಎಳೆ, ತಳ್ಳುವ ಕೆಲಸದ ಮೂಲಕ ಏನೇನು ಕೆಲಸಗಳು ನಡೆಯುವುದು ಎಂದು ಕಂಡುಹಿಡಿಯಿರಿ.**

| ಎಳೆಯುವ/ತಳ್ಳುವ ಕೆಲಸ | ನಡೆಯುವ ಕೆಲಸ |
|---|---|
|  | ವಸ್ತುಗಳನ್ನು ಅರೆಯುವುದು |
|  | ________________ |
|  | ________________ |
|  | ________________ |
|  | ________________ |

**ನಿಮಗಿದು ತಿಳಿದಿದೆಯೇ ?**

ನೀವು ಗೋಡೆಗೆ ಚೆಂಡನ್ನು ಎಸೆದಾಗ ಅದು ಪುನಃ
ಅದೇ ವೇಗದಲ್ಲಿ ನಿಮ್ಮ ಕೈಗೆ ಬರುವುದು ಏಕೆ?



# 3. ಶುಚಿತ್ವವೇ ಸುಖ

**ನಿಮ್ಮ ಸುತ್ತಮುತ್ತಲಿನಲ್ಲಿ ಇಂತಹ ದೃಶ್ಯಗಳನ್ನು ನೋಡಿರುವಿರಾ ?**














- ಇಂತಹ ಕಾರ್ಯಗಳು ನಡೆಯದಿದ್ದರೆ ಏನಾಗುವುದು ?
- ಮೇಲ್ಕಂಡ ಕಾರ್ಯಗಳು ಯಾವ ಯಾವ ಸ್ಥಳಗಳಲ್ಲಿ ನಡೆಯುವುದು ?

**ಚಿತ್ರವನ್ನು ನೋಡಿರಿ. ಶುಚಿತ್ವದ ಕಾರ್ಯ ನಡೆಯುವ ದೃಶ್ಯವನ್ನು ಮಾತ್ರ ಕಂಡುಹಿಡಿದು ವೃತ್ತ ಹಾಕಿರಿ.**



**ವೃತ್ತ ಹಾಕಿರುವ ಕಾರ್ಯಗಳನ್ನು ಮಾತ್ರ ತೆಗೆದು ಬರೆಯೋಣವೇ !**

ಕೆಳಗೆ ಕೊಡಲ್ಪಟ್ಟಿರುವ ಕಾರ್ಯಗಳಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬುವುದನ್ನು ಗುರುತಿಸೋಣವೇ.















- ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ಶಾಲೆ, ಆಸ್ಪತ್ರೆ, ಅಂಗಡಿ ಬೀದಿಯಂತಹ ಸ್ಥಳಗಳಲ್ಲಿ ಶುಚಿತ್ವ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ.
- ನಾವು ಆರೋಗ್ಯವಾಗಿರಲು ನಮ್ಮ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಡಬೇಕು.






ಹಳೆಯದು ಇದು

ಹೊಸದು ಯಾವುದು
ಎಂಬುವುದನ್ನು ಬಾಣದ ಗುರುತು ಹಾಕಿ ತೋರಿಸಿ !



## ಶೌಚಾಲಯದ ಉಪಯೋಗ



- ಶೌಚಾಲಯವನ್ನು ಮುಂಜಾನೆಯಲ್ಲಿ ಉಪಯೋಗಿಸುವುದು ಒಳ್ಳೆಯ ಪದ್ಧತಿ.
- ಶೌಚಾಲಯವನ್ನು ಸರಿಯಾದ ವಿಧಾನದಲ್ಲಿ ಉಪಯೋಗಿಸಬೇಕು.
- ಬಯಲುಗಳಲ್ಲಿ ಮಲವಿಸರ್ಜನೆ ಮಾಡಬಾರದು. ಏಕೆಂದರೆ ನಮ್ಮ ಸುತ್ತಮುತ್ತಲಿನ ಪರಿಸರವೂ ಹಾಗೂ ನಮ್ಮ ಆರೋಗ್ಯವೂ ಕೆಡುವುದು.
- ಶೌಚಾಲಯದಿಂದ ಹೊರಬಂದ ನಂತರ ನಮ್ಮ ಕೈಗಳನ್ನು ಸೋಪಿನಿಂದ ತೊಳೆಯಬೇಕು.
- ಶೌಚಾಲಯವನ್ನು ಶುಚಿಯಾಗಿಟ್ಟರಬೇಕು

**ವಿಶ್ವ ಶೌಚಾಲಯ ದಿನವನ್ನು 2009ನೇ ವರ್ಷದಿಂದ ಪ್ರತೀ ವರ್ಷವು ನವಂಬರ್ 19ನೇ ತಾರೀಖಿನಂದು ಆಚರಿಸಲಾಗುತ್ತಿದೆ.**

### ಚಿತ್ರದಲ್ಲಿರುವ ಉಪಕರಣಗಳ ಉಪಯೋಗಗಳು ಯಾವುವು.


















| | |
|---|---|
| ಕಸದ ಬುಟ್ಟಿ | ತ್ಯಾಜ್ಯವಸ್ತುಗಳ ಸೇಖರಣೆ |
| ಮನೆ ತೊಳೆಯುವ ಉಪಕರಣ | |
| ಬಾಚಣಿಗೆ | |
| ಕಸಬರಿಕೆ | |
| ಸೋಪು | |
| ಬೀದಿ ಗುಡಿಸುವ ಕಸಬರಿಕೆ | |
| ಟೂತ್‌ಪೇಸ್ | |

## ಚರ್ಚಿಸೋಣವೇ?

ಒಬ್ಬ ಮನುಷ್ಯನು ಮನೆಯಲ್ಲಿ ಗುಡಿಸಿದ ನಂತರ, ಅವನು ಬಾಳೆಹಣ್ಣು, ಕಿತ್ತಳೆ ಮತ್ತು ತರಕಾರಿಗಳ ಸಿಪ್ಪೆಗಳು, ಪ್ಲಾಸ್ಟಿಕ್ ಚೀಲ, ಗಾಜಿನ ಬಳೆ ಚೂರು ಮತ್ತು ಪೆನ್ನಿನ ಕವರ್‌ಗಳು ಕಸದ ಗುಂಪಾಗಿ ಕಾಣಲ್ಪಡುತ್ತವೆ. ಅವನು ಬಾಳೆಹಣ್ಣು, ಕಿತ್ತಳೆ ಮತ್ತು ತರಕಾರಿಗಳ ಸಿಪ್ಪೆಗಳನ್ನು ಒಂದು ಕಸದ ತೊಟ್ಟಿಯಲ್ಲು, ಇನ್ನಿತರ ಕಸಗಳನ್ನು ಇನ್ನೊಂದು ಕಸದ ತೊಟ್ಟಿಯಲ್ಲೂ ಹಾಕುತ್ತಾನೆ. ಏಕೆ?




## ಚಿತ್ರಿಸೋಣವೇ?

ಕೆಳಗೆ ಕೊಡಲ್ಪಟ್ಟಿರುವ ವಾಕ್ಯಗಳನ್ನು ಓದಿ, ಸರಿಯಾಗಿದ್ದರೆ  ಎಂದೂ ತಪ್ಪಾಗಿದ್ದರೆ  ಎಂದು ಬರೆಯಿರಿ

- ಬಯಲಿನಲ್ಲಿ ಮಲವಿಸರ್ಜನೆ ಮಾಡುವುದು.
- ಸ್ನಾನದ ನಂತರ ಆಹಾರ ಸೇವನೆ.
- ಸ್ನಾನಕ್ಕೂ ಮುಂಚೆ ಆಹಾರ ಸೇವನೆ
- ಮಲಗುವ ಮುಂಚೆ ಹಲ್ಲು ತಿಕ್ಕುವುದು
- ಆಹಾರ ಸೇವನೆಗೂ ಮುಂಚೆ ಕೈತೊಳೆಯುವ ಅವಶ್ಯಕತೆಯಿಲ್ಲ.

ಶುಚಿತ್ವ ಚಟುವಟಿಗಳನ್ನು ಗಮನಿಸಿ, ಅವುಗಳಿಗೆ 1,2,3... ಎಂದು ಸಂಖ್ಯೆಗಳನ್ನು ಕ್ರಮವಾಗಿ ನೀಡಿರಿ.

 ________

 ________

 ________

 ________

 ________

 ________

 ________

 ________

 ________

 ________

**ನಿಮಗಿದು ತಿಳಿದಿದೆಯೇ !**

ಸುತ್ತಮುತ್ತಲಿನಲ್ಲಿ ನಿಂತ ಕಶ್ಮಲ ನೀರಿನಲ್ಲಿ ಸೊಳ್ಳೆಗಳಿಂದ
ಹರಡುವ ರೋಗಗಳು ಯಾವುವು ?



# 4. ತೆಪ್ಪದ ಪಯಣ

ಪ್ರೀತಿಯ ರಕ್ಷಿತ್‌ಗೆ

ಸ್ಥಳ :
ದಿನಾಂಕ :

ನಾನು ಕ್ಷೇಮ, ನೀನು ಕ್ಷೇಮವೇ, ನಿನ್ನ ಪತ್ರವು ತಲುಪಿತು. ನೀನು ಪ್ರವಾಸಕ್ಕೆ ಹೋಗಿ ಬಂದ ಅನುಭವಗಳನ್ನು ಪತ್ರದಲ್ಲಿ ತಿಳಿಸಿರುವೆ.

ನಾವು ರಜದಲ್ಲಿ ನಮ್ಮ ಹಳ್ಳಿಗೆ ಹೋಗಿದ್ದೆವು. ಅಲ್ಲಿ ಊರಿನ ಜಾತ್ರೆ, ನಮ್ಮ ತೋಟ, ನದಿಯ ಪಯಣ ಮತ್ತು ಆಟಗಳನ್ನು ಆಡಿ ಸಂತೋಷದಿಂದ ಕಾಲ ಕಳೆದೆವು. ಅದರಲ್ಲಿ ನನಗೆ ತುಂಬಾ ಇಷ್ಟವಾದುದೆಂದರೆ, ತೆಪ್ಪದಲ್ಲಿ ಪಯಣ. ನಾವು ಕೆರೆಯ ದಡದಲ್ಲಿರುವ ದೇವಸ್ಥಾನವನ್ನು ನೋಡಲು ತೆಪ್ಪಕ್ಕಾಗಿ ಕಾದುಕುಳಿತೆವು.

ಆಗ ನದಿ ತೀರದಲ್ಲಿ ಹುಡುಗರು ಗಾಳದಿಂದ ಮೀನು ಹಿಡಿಯುವುದನ್ನು ಆಡು, ದನ ಕರುಗಳು ನೀರು ಕುಡಿಯುವುದನ್ನು ನೋಡಿದೆವು.



ತೆಪ್ಪವು ಬಂದಿತು ನಾವು ಒಬ್ಬೊಬ್ಬರಾಗಿ ಹತ್ತುವಾಗ ತೆಪ್ಪವು ಅಲುಗಾಡತೊಡಗಿತು. ನನಗೆ ಭಯ ಉಂಟಾಯಿತು. ಎಲ್ಲರೂ ಕುಳಿತುಕೊಂಡ ಮೇಲೆ ತೆಪ್ಪವು ಅಲುಗಾಡದೆ ಚಲಿಸಿತು.

**ತೆಪ್ಪದಲ್ಲಿ ಪಯಣಿಸುವಾಗ.....**

- ನೀರಿನಲ್ಲಿ ಜಿಗಿದು ಜಿಗಿದು ಈಜುವ ಮೀನುಗಳನ್ನು,
- ನುಲಿದು, ಅಂಕು ಡೊಂಕಾಗಿ ಚಲಿಸುವ ನೀರಿನ ಹಾವುಗಳನ್ನು,
- ಗಿಡ, ಬಳ್ಳಿ, ಮರದ ತುಂಡುಗಳು, ನದಿಯಲ್ಲಿ ತೇಲಿ ಬರುವುದನ್ನು ನೋಡಿದೆವು.



ಆಗ ತೆಪ್ಪವನ್ನು ಓಡಿಸುವವರು ತಕ್ಷಣ ತೆಪ್ಪವನ್ನು ಬೇಗನೆ ಪಕ್ಕಕ್ಕೆ ತಿರುಗಿಸಿದರು. ಏಕೆಂದರೆ, ಅಲ್ಲಿ ನೀರಿನ ಸುಳಿ ಇತ್ತು.



ಸ್ವಲ್ಪ ದೂರ ಹೋದೆವು. ಎದುರಿನಿಂದ ಒಂದು ಹಡಗು ಬಂತು. ಅದರಲ್ಲಿ ಬಂದವರು ರಕ್ಷಣಾ ಕವಚವನ್ನು ಧರಿಸಿದ್ದರು. ಹಡಗಿನ ಸುತ್ತ ರಬ್ಬರ್ ಕೊಳಾಯಿ ಇತ್ತು. ಅದನ್ನು ಕಂಡೊಡನೆ ನಾವು ರಕ್ಷಣೆಗಾಗಿ ಈ ರೀತಿಯ ಕವಚವನ್ನು ತರಲಿಲ್ಲವಲ್ಲಾ ಎಂದು ಭಯಪಟ್ಟೆವು.



ನಂತರ ತೆಪ್ಪವು ಮರದ ಸೇತುವೆ ಕೆಳಗೆ ಚಲಿಸುತ್ತಿರುವಾಗ "ಡಮಾರ್" ಎಂಬ ಶಬ್ಧ ಕೇಳಿಸಿತು. ನಮ್ಮ ಮೇಲೆಲ್ಲಾ ನೀರು ಎರಚಿತು.

ಹಿಂದಿರುಗಿ ನೋಡಿದಾಗ ಮರದ ಸೇತುವೆಯ ಮೇಲಿಂದ ಹುಡುಗರು ಒಬ್ಬೊಬ್ಬರಾಗಿ ಜಿಗಿದು ನೀರಿಗೆ ದುಮುಕುತ್ತಿದ್ದರು. ಆಗ ನಮಗೂ ನೀರಿಗೆ ದುಮುಕುವ ಆಸೆಯಾಯಿತು.

ನದೀ ತೀರದಲ್ಲಿ ತೆಪ್ಪವು ಚಲಿಸುವಾಗ ಬೆಳೆದು ನಿಂತಿರುವ ತೆಂಗಿನ ಮರದಲ್ಲಿ ತೆಂಗಿನ ಕಾಯಿಗಳು ನೇತಾಡುವುದನ್ನು, ಅದರ ಗರಿಗಳಲ್ಲಿ ನೀರು ಜಿನುಗುತ್ತಿರುವುದನ್ನು, ನದೀ ತೀರಿದ ಹಚ್ಚ ಹಸುರಿನ ದೃಶ್ಯವನ್ನು ಕಂಡು ಸಂತೋಷವಾಗುತ್ತಿತ್ತು.





ನದೀ ತೀರದ ಹತ್ತಿರ ಬಂದಾಗ ನೀರಿನಲ್ಲಿ ನಾಯಿಯು ವೇಗವಾಗಿ ಈಜಿ ಬರುತ್ತಿತ್ತು.



ಅದನ್ನು ನೋಡಿದ ಏಡಿಯು ತನ್ನ ಬಿಲದ ಕಡೆಗೆ ವೇಗವಾಗಿ ಓಡಲು



ಕಪ್ಪೆಯು ನದಿ ತೀರದಿಂದ ನೀರಿಗೆ ಜಿಗಿಯಲು



ಮೀನನ್ನು ಹಿಡಿಯಲು ಕೊಕ್ಕರೆಯ ಗುಂಪು ಆಕಾಶದಲ್ಲಿ ಹಾರುತ್ತಿರುವ ರಮಣೀಯ ದೃಶ್ಯವನ್ನು ಕಂಡೆನು.

ಈ ತೆಪ್ಪದ ಪಯಣವು ನನಗೆ ಆಶ್ಚರ್ಯವನ್ನು, ಸಂತೋಷನ್ನು ತಂದಿತು. ಮುಂದಿನ ರಜೆಯಲ್ಲಿ ನೀನು ಇಲ್ಲಿಗೆ ಬಾ ನಾವೆಲ್ಲರೂ ನದಿಯಲ್ಲಿ ಪಯಣಿಸೋಣ.

ನಿನ್ನ ಪ್ರೀತಿಯ
ರೋಹಿತ್

## ಗಮನಿಸಿರಿ

ತೆಪ್ಪದಲ್ಲಿ ಪಯಣಿಸುವಾಗ ನಿಂತು ಕೊಳ್ಳಬಾರದು.







ತೆಪ್ಪದಲ್ಲಿ ನಿರ್ದಿಷ್ಟ ಸಂಖ್ಯೆಯಲ್ಲಿ ಮಾತ್ರ ಜನರು ಪಯಣಿಸಬೇಕು.

ತೆಪ್ಪದಲ್ಲಿ ಪಯಣಿಸುವಾಗ ಖಂಡಿತ ರಕ್ಷಣಾ ಕವಚವನ್ನು ಧರಿಸಬೇಕು.





ನೀರಿನಲ್ಲಿ ಸುಳಿ ಇರುವ ಸ್ಥಳಗಳ ಪಕ್ಕದಲ್ಲಿ ಹೋಗಬಾರದು.




ಕೆಸರು ಮಣ್ಣಿರುವ ಸ್ಥಳಗಳಲ್ಲಿ ಸ್ನಾನ ಮಾಡಬಾರದು.

ನೀರಿನಲ್ಲಿ ಪ್ರಯಾಣಿಸುವಾಗ ಅಪಘಾತದಿಂದ ಪಾರಾಗಲು ಸಹಾಯಕವಾಗುವ ವಸ್ತುಗಳಿಗೆ ವೃತ್ತಹಾಕಿರಿ.

ಹೆಲ್ಮೇಟ್, ಬಿದಿರು ದಂಡೆ

ರಕ್ಷಣಾಕವಚ ರಕ್ಷಣಾದೋಣಿ

## ಪ್ರಯಾಣದ ಹಲವು ಬಗೆಗಳು







ಎತ್ತಿನ ಗಾಡಿ ಪ್ರಯಾಣ, ತೆಪ್ಪದ ಪಯಣ, ಬಸ್ಸಿನ ಪ್ರಯಾಣ, ರೈಲಿನ ಪ್ರಯಾಣ, ಹಡಗಿನ ಪ್ರಯಾಣ, ವಿಮಾನದ ಪ್ರಯಾಣ ಎಂದು ಪ್ರಯಾಣದಲ್ಲಿ ಹಲವು ಬಗೆಗಳುಂಟು.

ಅದರಲ್ಲಿ,

ರಸ್ತೆಯಲ್ಲಿ ಮಾಡುವ ಪ್ರಯಾಣ ______________

ನೀರಿನಲ್ಲಿ ಮಾಡುವ ಪ್ರಯಾಣ ______________

ಆಕಾಶದಲ್ಲಿ ಮಾಡುವ ಪ್ರಯಾಣ ______________









**ನಿಮಗಿದು ತಿಳಿದಿದೆಯೇ ?**

ಬೆಟ್ಟ ಪ್ರದೇಶಗಳಲ್ಲಿ ಪ್ರಯಾಣ ಮಾಡುವಾಗ
ಯಾವ ಯಾವ ದೃಶ್ಯಗಳನ್ನು ನೋಡುವಿರಿ ?



## ‘ನನ್ನಿಂದ ಸಾಧ್ಯ, ನಾನು ಮಾಡಿದೆ’
## (‘I can I did’)
## ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

**ವಿಷಯ :**

| ಕ್ರ.ಸಂ | ತಾರೀಖು | ಪಾಠದ ಸಂಖ್ಯೆ | ಪಾಠದ ಹೆಸರು | ಚಟುವಟಿಕೆಗಳು | ಅಭಿಪ್ರಾಯಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |